**O. S. No.**38/2023

**DW**-2

**ಸಾಕ್ಷಿಯನ್ನು ಕರೆಸಿ ದಿನಾಂಕಃ 11-11-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಎಂ. ಎಲ್. ನಾಯ್ಕರಿಂದಃ**

ಡಿಡಬ್ಲು-1 ರವರು ಏನು ಸಾಕ್ಷಿ ನುಡಿದಿದ್ದಾರೆ ನನಗೆ ಗೊತ್ತಿಲ್ಲ. ನಾನು 8 ನೇ ತರಗತಿವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ವಾದಿಯರ ದಾವೆಯ ಬಗ್ಗೆ ಅರ್ಥ ಆಗಿದೆ. ವಾದಿಯರು ಬರೆದಿರುವ ವಂಶಾವಳಿಯನ್ನು ನಾನು ನೋಡಿದ್ದೇನೆ. ಸದರಿ ವಂಶಾವಳಿ ಸರಿ ಇದೆ. ತಕರಾರು ಸಲ್ಲಿಸುವ ಕಾಲಕ್ಕೆ ವಂಶಾವಳಿ ಸರಿ ಇಲ್ಲ ಎಂದು ಹೇಳಿ ಬರೆಸಿದ್ದೇನೆ. ವಾದಿಗೆ ತೊಂದರೆ ಕೊಡಲು ವಂಶಾವಳಿ ಸರಿ ಇಲ್ಲ ಎಂದು ಸುಳ್ಳು ತಕರಾರು ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಜೊತೆಯಲ್ಲಿ ಪ್ರತ್ಯೇಕ ವಂಶಾವಳಿಯನ್ನು ಹಾಜರುಪಡಿಸಿಲ್ಲ. ಪ್ರತ್ಯೇಕವಾದ ವಂಶಾವಳಿಯನ್ನು ಬರೆಯುವಂತೆ ನನ್ನ ವಕೀಲರಿಗೆ ಹೇಳಿದ್ದೇನೆ. ವಕೀಲರು ಸಲ್ಲಿಸಿರುವ ತಕರಾರನ್ನು ನಾನು ಓದಿ ಸಹಿ ಮಾಡಿದ್ದೇನೆ. ನಾನು ಹೇಳಿರುವಂತೆ ವಂಶಾವಳಿಯನ್ನು ತಕರಾರಿನಲ್ಲಿ ಬರೆಯಲಾಗಿದೆ.

(ಮುಂದಿನ ಪಾಟೀಸವಾಲನ್ನು ಸಮಯ ಕೋರಿದ್ದರಿಂದ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಪ್ರ.ದ.ನ್ಯಾದಂ.**

**ಹೊನ್ನಾವರ.**